ತಳ್ಳಿಬಿಟ್ಟಂತೆ ಭಾಸವಾಯಿತು. ಅವಳು ಮೂರ್ಛೆ ಹೋಗಿದ್ದಳು.

ಅವಳು ಎಚ್ಚರಗೊಂಡಾಗಲೂ ಯಾರ ಶಬ್ದವೂ ಕೇಳುತ್ತಿರಲಿಲ್ಲ. ಎಲ್ಲರೂ ಉಂಡು ತಿಂದು ಮಲಗಿರಬಹುದು. ಅದರ ಜೊತೆಗೆ ತನ್ನ ಭಾಗ್ಯವೂ ಮಲಗಿತೆಂದು ತಿಳಿದಳು. ರಾತ್ರಿ ಹೇಗೆ ಕಳೆಯಲಿ? ರಾಮಾ, ಏನು ತಿನ್ನಲಿ? ಹೊಟ್ಟೆಯಲ್ಲಿ ಬೆಂಕಿ ಹಾಕಿದ ಹಾಗಾಗುತ್ತಿದೆ. ಯಾರಾದರೊಬ್ಬರು ನನ್ನನ್ನು ವಿಚಾರಿಸಿಕೊಂಡರೆ? ನನಗೊಬ್ಬಳಿಗೆ ಹೊಟ್ಟೆಗೆ ಹಾಕದಿದ್ದರೆ ಅವರು ಶ್ರೀಮಂತರಾಗಿಬಿಡುತ್ತಿದ್ದರೆ? ಈ ಮುದುಕಿ ಸತ್ತು ಹೋದಾಳೆಂದು ಕರುಣೆಯೂ ಬೇಡವೆ? ನನ್ನನ್ನು ಏಕೆ ಗೋಳು ಹುಯ್ದುಕೊಳ್ಳುತ್ತಾರೆ? ನಾನೂ ಎಲ್ಲರೂ ತಿನ್ನುವ ರೊಟ್ಟಿಯನ್ನೇ ತಿನ್ನುತ್ತೇನೆ. ಇನ್ನೇನು ತಿನ್ನುತ್ತೇನೆ! ಆದರೂ ಈ ಸ್ಥಿತಿ. ನಾನೊಬ್ಬ ಕುಂಟಿ, ಕುರುಡಿ, ನನಗೇನು ತಿಳಿಯುತ್ತದೆ? ಅಂಗಳಕ್ಕೆ ಹೋದರೆ ಏನಾಯಿತು. ಬುದ್ಧಿರಾಮನಿಗೆ ಇಷ್ಟು ಹೇಳಲು ಆಗುತ್ತಿರಲಿಲ್ಲವೆ? 'ಚಿಕ್ಕಮ್ಮ, ಅತಿಥಿಗಳು ಇನ್ನೂ ಊಟ ಮಾಡುತ್ತಿದ್ದಾರೆ. ಆಮೇಲೆ ಬಾ' ಎಂದಿದ್ದರೆ ಸಾಕಾಗಿತ್ತು, ನನ್ನನ್ನು ಎಳೆದು ಕುಕ್ಕಿ ಬಿಟ್ಟ. ಅದೇ ಪೂರಿ ತಿನ್ನಲು ಹೋದಾಗ ರೂಪ ಎಲ್ಲರ ಮುಂದೆ ಬೈದಳು. ಆ ಪೂರಿಗಾಗಿ ನನಗೆ ಇಂಥ ದುರ್ಗತಿ ತಂದರೂ ಅವರ ಹೃದಯ ಕರಗಲಿಲ್ಲವೆ? ಎಲ್ಲರಿಗೂ ಬಡಿಸಿದರು ನನ್ನನ್ನು ಮಾತು ಕೂಡ ಆಡಿಸಲಿಲ್ಲವಲ್ಲ! ಆಗಲೇ ಕೊಡದಿದ್ದವರು ಈಗ ತಂದು ಕೊಡುತ್ತಾರೆಯೆ!

ಇಷ್ಟೆಲ್ಲ ಯೋಚಿಸಿದ ಚಿಕ್ಕಮ್ಮ ಏನೋ ಒಂದು ತರಹದ ನಿರಾಶೆಯ ನೆಮ್ಮದಿಯಲ್ಲಿ ಮಲಗಿಬಿಟ್ಟಳು. ಗ್ಲಾನಿಯಿಂದ ಕಂಠ ಬಿಗಿದು ಬರುತ್ತಿತ್ತು. ಆದರೂ ಅತಿಥಿಗಳ ಭಯದಿಂದ ಅಳಲಿಲ್ಲ.

ಇದ್ದಕ್ಕಿದ್ದಂತೆಯೇ "ಚಿಕ್ಕಮ್ಮಾ, ಏಳು ಪೂರಿ ತಂದಿದ್ದೀನಿ" ಎಂಬ ಧ್ವನಿ ಕೇಳಿಸಿತು. ಚಿಕ್ಕಮ್ಮನಿಗೆ ಇದು ಪುಟ್ಟಿಯ ಧ್ವನಿ ಎಂದು ಗೊತ್ತಾಯಿತು. ತಟಕ್ಕನೆ ಎದ್ದು ಕುಳಿತಳು. ಎರಡೂ ಕೈಯಿಂದ ಪುಟ್ಟಿಯನ್ನು ತಡಕಿ, ತೊಡೆಯ ಮೇಲೆ ಕೂರಿಸಿಕೊಂಡಳು. ಪುಟ್ಟಿ ಪೂರಿ ತೆಗೆದಳು. "ನಿನ್ನ ಅಮ್ಮ ಕೊಟ್ಟಳೇನು?" ಎಂದು ಕೇಳಿದಳು ಮುದುಕಿ.

"ಇಲ್ಲ, ನಾನೇ ನನ್ನ ಪಾಲಿಂದು ತಂದೆ."

ಚಿಕ್ಕಮ್ಮ ಪೂರಿಯ ಮೇಲೆ ಮುಗಿಬಿದ್ದಳು. ಐದು ನಿಮಿಷದಲ್ಲಿ ಡಬ್ಬಿ ಖಾಲಿ! ಪುಟ್ಟಿ "ಚಿಕ್ಕಮ್ಮ, ಹೊಟ್ಟೆ ತುಂಬಿತಾ?" ಎಂದು ಕೇಳಿದಳು.

ಕೆಲವೇ ಹನಿಗಳಿಂದ ಮಳೆಯು ಭೂಮಿಯನ್ನು ತಣ್ಣಗಾಗಿಸುವ ಬದಲು ಇನ್ನೂ ಹೆಚ್ಚಿಸುವಂತೆ ಚಿಕ್ಕಮ್ಮನ, ಆಸೆ ಹಸಿವು ಆ ಪೂರಿಗಳಿಂದ ಇನ್ನೂ ಹೆಚ್ಚಾಯಿತು.

"ಇಲ್ಲಮ್ಮ, ಹೋಗಿ ಅಮ್ಮನ ಹತ್ತಿರ ಇನ್ನಷ್ಟು ಕೇಳಿ ತೆಗೆದುಕೊಂಡು ಬಾ" ಎಂದಳು.

"ಅಮ್ಮ ಮಲಗಿದ್ದಾಳೆ. ಎಬ್ಬಿಸಿದರೆ ಹೊಡೆಯುತ್ತಾಳೆ."

ಚಿಕ್ಕಮ್ಮ ಡಬ್ಬಿಯನ್ನು ಮತ್ತೆ ತಡಕಿದಳು. ಅದರಲ್ಲಿದ್ದ ಪೂರಿ ಚೂರುಗಳನ್ನು ತಿಂದಳು. ಕೈಯನ್ನು ಚೆನ್ನಾಗಿ ನೆಕ್ಕಿದಳು. ನಾಲಿಗೆ ಚಪ್ಪರಿಸಿದಳು.

ಹೇಗೆ ಇನ್ನಷ್ಟು ಪುರಿಯನ್ನ ತಿನ್ನುವುದು? ಎಂದು ಯೋಚಿಸತೊಡಗಿದಳು. ಸಂತೋಷದ ಅಣೆಕಟ್ಟು ಹರಿದಾಗ ಆಸೆ ಅಪರಿಮಿತವಾಗಿ ಹರಿದು ಬಿಡುತ್ತದೆ. ನಶೆ ಏರಿದವರು ನಶೆಯ ಸ್ಮರಣೆ ಮಾತ್ರದಿಂದ ಮತ್ತರಾಗಿ ಬಿಡುತ್ತಾರೆ. ಚಿಕ್ಕಮ್ಮನ ಅಸ್ಥಿರ ಮನಸ್ಸು ಆಸೆಯ ಪ್ರಬಲ ಪ್ರವಾಹದಲ್ಲಿ ಹರಿದು ಹೋಯಿತು. ಉಚಿತ ಅನುಚಿತದ ವಿವೇಚನೆ ಹೊರಟು ಹೋಯಿತು. ಸ್ವಲ್ಪ ಹೊತ್ತಿನವರೆಗೆ ಆಸೆ ತಡೆದಳು. ತಕ್ಷಣ ಪುಟ್ಟಿಗೆ "ನನ್ನ ಕೈ ಹಿಡಿದು ಜನ ಊಟ ಮಾಡಿದ್ದ